ಇ) ಸಾರ್ವಜನಿಕ ಹಾಗೂ ಐತಿಹಾಸಿಕ ಹಿನ್ನೆಲೆಯಲ್ಲಿ ಪುನರ್ ವಸತಿ ಸಂಗೊಳ್ಳಿಯಲ್ಲಿ (Rehabited Area) ಸಂಗೊಳ್ಳಿ ರಾಯಣ್ಣ ಸಮಾಧಿಯನ್ನು ಸ್ಥಾಪಿಸಿ ಅಭಿವೃದ್ಧಿಪಡಿಸಲು ಯಾವ ಕ್ರಮವನ್ನು ಕೈಕೊಂಡಿರುವರು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಸರ್ಕಾರದ ವತಿಯಿಂದ ಪ್ರತಿಷ್ಠಾಪಿಸಿಲ್ಲ. ಸಾರ್ವಜನಿಕರ ಸಣ್ಣ ಕೊಠಡಿಯಲ್ಲಿ ಪ್ರತಿಷ್ಠಾಪಿಸಿಕೊಂಡಿದ್ದಾರೆ.

ಇ) ವಿಷಯವು ಪರಿಶೀಲನೆಯಲ್ಲಿದೆ.

ಕಪ್ಪು ಹಲಗೆಯ ಕಾರ್ಯಾಚರಣೆ

೧೧೧೬. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಪ್ಪು ಹಲಗೆಯ ಕಾರ್ಯಚರಣೆಯ ರೇಷೆಗಳೇನು ?

ಆ) ೧೯೮೭–೮೮ ಹಾಗೂ ೧೯೮೮–೮೯ರಲ್ಲಿ ಸರ್ಕಾರವು ಈ ಕಾರ್ಯಕ್ಕೆ ಕಾಯ್ದಿರಿಸಿದ ಹಣವೆಷ್ಟು?

ಇ) ರಾಜ್ಯದಲ್ಲಿ ಆಯ್ದುಕೊಂಡ ತಾಲ್ಲೂಕುಗಳು ಎಷ್ಟು ?

ಈ) ಇನ್ನುಳಿದ ತಾಲ್ಲೂಕುಗಳಿಗೆ ಈ ಕಾರ್ಯವನ್ನು ವಿಸ್ತರಿಸುವ ಯೋಜನೆ ಸರ್ಕಾರಕ್ಕೆ ಇದೆಯೇ

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬ರ ಅಡಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸಫಲಗೊಳಿಸಲು ಈ ಕೆಳಕಂಡ ಅಂಶಗಳನ್ನು ಅಳವಡಿಸಿಕೊಳ್ಳಲಾಗಿದೆ.

೧) ಪ್ರತಿಯೊಂದು ಪ್ರಾಥಮಿಕ ಶಾಲೆಯೂ,—

ಅ) ಕನಿಷ್ಠ ಪಕ್ಷ ೨ ಕೊಠಡಿಗಳನ್ನು ಹೊಂದಿರಬೇಕು.

ಆ) ಬಾಲಕ-ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ

ಇ) ಕುಡಿಯಲು ಶುದ್ಧ ನೀರು ವಿದ್ಯುತ್ ವ್ಯವಸ್ಥೆ

ಈ) ಪಾಠೋಪಕರಣ-ಪಿಠೋಪಕರಣಗಳ ಪೂರೈಕೆ

೨) ಏಕೋಪಾಧ್ಯಾಯ ಶಾಲೆಗಳಿಗೆ ಮತ್ತೊಂದು ಉಪಾಧ್ಯಾಯರ ನೇಮಕ ಆದ್ಯತೆ ಮಹಿಳೆಯರಿಗೆ.

ಆ) ೧೯೮೭–೮೮ ೬.೭೮ ಕೋಟಿ ರೂಪಾಯಿಗಳು. ೧೯೮೮–೮೯ ಕಾಯ್ದಿರಿಸಿಲ್ಲ.

ಇ) ೧೯೮೭–೮೮ರ ಸಾಲಿಗೆ ಒಟ್ಟು ೧೯ ತಾಲೂಕುಗಳನ್ನು ಆಯ್ದುಕೊಳ್ಳಲಾಗಿದೆ.

ಈ) ಇದೆ.

ರಾಜ್ಯದಲ್ಲಿರುವ ಮಹಿಳೆಯರ ಶಾಲಾ–ಕಾಲೇಜುಗಳು

೭೯೭. ಶ್ರೀ ಪಂಪಾಪತಿಯವರು (ದಾವಣಗೆರೆ).—ಮಾನ್ಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಒಟ್ಟು ಮಹಿಳಾ ಶಾಲಾ ಕಾಲೇಜು ಹಾಗೂ ವಿದ್ಯಾರ್ಥಿನಿಲಯಗಳೆಷ್ಟು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿ ಒಟ್ಟು ೨೬೦೭ ಶಾಲಾ ಕಾಲೇಜುಗಳು ಮತ್ತು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ೨೫೫ ಮಹಿಳಾ ವಿದ್ಯಾರ್ಥಿ ನಿಲಯಗಳು ಇವೆ.

ಉಚಿತ ಪಠ್ಯ ಪುಸ್ತಕ ಹಾಗೂ ಬಟ್ಟೆಗಳ ಯೋಜನೆ

೫೫೯. ಶ್ರೀ ಶಿವಸಂಗಪ್ಪ, ಶಿದ್ದಪ್ಪ ಕಡ ಪಟ್ಟಿ (ಹುನಗುಂದ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಪಠ್ಯ ಪುಸ್ತಕ ಹಾಗೂ ಉಚಿತ ಬಟ್ಟೆಗಳಿಗಾಗಿ ಸರ್ಕಾರವು ಖರ್ಚು ಮಾಡಿದ ಹಣವೆಷ್ಟು ? (ಯೋಜನೆ ಪ್ರಾರಂಭದಿಂದ ಡಿಸೆಂಬರ್ ೮೭ರ ವರೆಗೆ ಪ್ರತಿ ವರ್ಷದ ಎರಡು ಬಾಬಿನ ಪ್ರತ್ಯೇಕ ವಿವರ ನೀಡುವುದು)

ಆ) ಹಳೆ ಪುಸ್ತಕಗಳು ಕಳೆದ ೨ ವರ್ಷಗಳಲ್ಲಿ ಎರಡು ಬಾರಿ ಉಪಯೋಗ ಮಾಡಿರುವುದರಿಂದ ಇನ್ನು ಬೇಕಾಗಿರುವ ಪಠ್ಯ ಪುಸ್ತಕಗಳನ್ನು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಮುದ್ರಿಸಲು ಕ್ರಮ ಕೈಗೊಳ್ಳಲಾಗಿದೆಯೇ ?

ಇ) ಹಾಗಿದ್ದಲ್ಲಿ ಹಳೆ ಪುಸ್ತಕಗಳನ್ನು ಪದೇ ಪದೇ ಉಪಯೋಗಿಸಿರುವ ಕಾರಣ ಸರ್ಕಾರಕ್ಕೆ ಉಳಿತಾಯವಾದ ಮೊತ್ತವೆಷ್ಟು ?

ಈ) ಉಚಿತ ಬಟ್ಟೆ ವಿತರಣೆಗಾಗಿ ಹೊರ ರಾಜ್ಯಗಳಿಂದ ಎಷ್ಟು ಬಟ್ಟೆ ಯಾವ ನಮೂನೆಯ ಹಾಗೂ ಯಾವ ದರದಿಂದ ಖರೀದಿಸಲಾಗಿದೆ? (ಯೋಜನೆಯ ಪ್ರಾರಂಭದಿಂದ ಡಿಸೆಂಬರ್ ೮೭ರವರೆಗೆ ಪ್ರತಿ ವರ್ಷದ ವಿವರ ಕೊಡುವುದು ?

ಉ) ಉಚಿತ ಸಮವಸ್ತ್ರಗಳ ಬಟ್ಟೆಯನ್ನು ಎನ್.ಟಿ.ಸಿ. ಕೈ ಮಗ್ಗ ಖಾದಿ ಗ್ರಾಮೋದ್ಯೋಗ ಮಂಡಳಿಯಿಂದ ಪಡೆಯಲು ಸಾಧ್ಯವಾಗಿಲ್ಲವೇ ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ)

ವರ್ಷ	ಪಠ್ಯ ಪುಸ್ತಕಗಳು (ಲಕ್ಷ ರೂ.ಗಳಲ್ಲಿ)	ಉಚಿತ ವಸ್ತ್ರಗಳು (ಲಕ್ಷ ರೂ.ಗಳಲ್ಲಿ)
೧೯೮೫-೮೬	೪೧೧.೫೦	೧೨೧೭.೪೯
೧೯೮೬-೮೭	೩೯೦.೦೦	೭೮೨.೦೦
೧೯೮೭-೮೮	೪೬೨.೦೦	೯೧೭.೨೭

ಆ) ಹಿಂದಿನ ವರ್ಷ ವಿದ್ಯಾರ್ಥಿಗಳಿಗೆ ಉಚಿತವಾಗಿ ಹಂಚಲಾದ ಪುಸ್ತಕಗಳನ್ನೂ ಹಿಂದಿರಿಗಿ ಪಡೆಯುವುದು ಮತ್ತು ಅವುಗಳನ್ನು ಶಾಲಾ ಗ್ರಂಥಾಲಯದಲ್ಲಿ ಕಾಯ್ದಿರಿಸುವುದು ಮತ್ತು ಸಾಧ್ಯವಾದಷ್ಟು ಮಟ್ಟಿಗೆ ವರ್ಷದ ಅವಧಿಯಲ್ಲಿ ಅವುಗಳನ್ನೂ ಕಾಪು ದಾಸ್ತಾನಾಗಿ ಉಪಯೋಗಿಸಬಹುದು.

ಇ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲಾ

ಈ) ಹೊರ ರಾಜ್ಯಗಳಿಂದ ಪಡೆದ ಬಟ್ಟೆಗಳ ವಿವರಗಳನ್ನು ಲಗತ್ತಿಸಿದೆ(ಅನುಬಂಧ-೧)

ಉ) ಇದುವರೆವಿಗೆ ಉಚಿತ ಸಮವಸ್ತ್ರಗಳಿಗಾಗಿ ಬೇಕಾದ ಬಟ್ಟೆಯನ್ನು ಸಹಕಾರ ಸಂಸ್ಥೆಗಳ ಸಾಮರ್ಥ್ಯವನ್ನು ಅವಲಂಬಿಸಿ, ಕರ್ನಾಟಕ ಕೈ ಮಗ್ಗಗಳ ಅಭಿವೃದ್ಧಿ ಮಂಡಳಿ ಮತ್ತು ಕರ್ನಾಟಕ ಗ್ರಾಹಕರ ಸಹಕಾರ ಮಹಾಮಂಡಳಿ ಈ ಸಂಸ್ಥೆಗಳ ಮೂಲಕ ಎನ್.ಟಿ.ಸಿ. ಮತ್ತು ಕೈಮಗ್ಗ ಉತ್ಪಾದನೆಯನ್ನು ಕೊಳ್ಳುವ ವ್ಯವಸ್ಥೆ ಇದೆ. ಇಂತಹ ಅತಿ ಹೆಚ್ಚಿನ ಬಟ್ಟೆ ಬೇಡಿಕೆಯನ್ನು ಖಾದಿ ಗ್ರಾಮೋದ್ಯೋಗ ಮಂಡಳಿಯಿಂದ ಪಡೆಯುವ ವ್ಯವಸ್ಥೆಯಾದಂತೆ ಕಾಣಲಿಲ್ಲ.